## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 897
ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರು
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 11.03.2026

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಕಲಬುರಗಿ ಜಿಲ್ಲೆಯ ಅಫಜಲಪುರ, ಆಳಂದ ಮತ್ತು ಚಿಂಚೋಳಿಯಂತಹ ಗಡಿ ಭಾಗದ ಎಷ್ಟು ಹಳ್ಳಿಗಳಿಗೆ ಕೆ.ಕೆ.ಆರ್.ಟಿ.ಸಿ ಬಸ್ ಸಂಪರ್ಕ ಕಲ್ಪಿಸಿಲ್ಲ;</td><td>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಿಂದ ಕಲಬುರಗಿ ಜಿಲ್ಲೆಯ ಗಡಿ ಭಾಗದ ಅಫಜಲಪುರ, ಆಳಂದ ಮತ್ತು ಚಿಂಚೋಳಿ ತಾಲೂಕುಗಳ ಎಲ್ಲಾ ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದ್ದು, ವಿವರ ಈ ಕೆಳಗಿನಂತಿದೆ:<br><table><tr><th>ತಾಲೂಕು</th><th>ಒಟ್ಟು ಜನವಸತಿ ಗ್ರಾಮಗಳ ಸಂಖ್ಯೆ</th><th>ಬಸ್ ಸೇವೆ ಒದಗಿಸಿದ ಗ್ರಾಮಗಳ ಸಂಖ್ಯೆ</th></tr><tr><td>ಚಿಂಚೋಳಿ</td><td>101</td><td>101</td></tr><tr><td>ಆಳಂದ</td><td>112</td><td>112</td></tr><tr><td>ಅಫಜಲಪೂರ</td><td>89</td><td>89</td></tr></table></td></tr>
<tr><td>ಆ.</td><td>2025-26ನೇ ಸಾಲಿನಲ್ಲಿ ಕಲಬುರಗಿ ನಗರದ ಜನದಟ್ಟಣೆ ಕಡಿಮೆ ಮಾಡಲು 'ನಗರ ಸಾರಿಗೆ' (City Transport) ವಿಸ್ತರಣೆ ಮಾಡುವ ಯೋಜನೆ ಇದೆಯೇ;</td><td>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಿಂದ ಕಲಬುರಗಿ ನಗರದಲ್ಲಿ 2024-25ನೇ ಸಾಲಿನಲ್ಲಿ 62 ಅನುಸೂಚಿಗಳಿಂದ 1007 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿತ್ತು. 2025-26ನೇ ಸಾಲಿನಲ್ಲಿ ಕಲಬುರಗಿ ನಗರದಲ್ಲಿ ಒಟ್ಟು 75 ಅನುಸೂಚಿಗಳಿಂದ 1189 ಸರತಿಗಳನ್ನು ಜನದಟ್ಟಣೆ/ ಬೇಡಿಕೆಯಿರುವ ಮಾರ್ಗಗಳಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ. 13 ಅನುಸೂಚಿಗಳನ್ನು ಹೆಚ್ಚಿಸಿ 182 ಹೆಚ್ಚುವರಿ ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, 2025-26ನೇ ಸಾಲಿನಲ್ಲಿ ಕಲಬುರಗಿ ನಗರದ ಜನದಟ್ಟಣೆ ಕಡಿಮೆ ಮಾಡಲು 25 ಹೊಸ ನಗರ ಸಾರಿಗೆ ಬಸ್ಸುಗಳನ್ನು ಒದಗಿಸಲಾಗಿದೆ.</td></tr>
<tr><td>ಇ.</td><td>ಗ್ರಾಮೀಣ ಭಾಗದ ವಿದ್ಯಾರ್ಥಿನಿಯರಿಗಾಗಿ 'ಶಕ್ತಿ ಯೋಜನೆಯಡಿ ಹೆಚ್ಚುವರಿ ಬಸ್‌ಗಳನ್ನು ನಿಯೋಜಿಸಲಾಗಿದೆಯೇ;</td><td>"ಶಕ್ತಿ ಯೋಜನೆ"ಯಡಿ ಮಹಿಳೆಯರಿಗೆ ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಿರುವುದರಿಂದ ಸರ್ಕಾರಿ ಬಸ್‌ಗಳಲ್ಲಿ ಸಂಚರಿಸುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿರುತ್ತದೆ. ಕಲಬುರಗಿ ಜಿಲ್ಲೆಯ ವ್ಯಾಪ್ತಿಯ ಎಲ್ಲಾ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಹೆಚ್ಚುವರಿ ಸರತಿಗಳನ್ನು ಅಳವಡಿಸಲು ಕ್ರಮವಹಿಸಲಾಗುತ್ತಿದೆ.<br><br>ಪ್ರತಿ ತಿಂಗಳು ಮೊದಲನೆಯ ಸೋಮವಾರದಂದು ಎಲ್ಲಾ ವಿಭಾಗಗಳಲ್ಲಿ ಫೋನ್-ಇನ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಸದರಿ ಕಾರ್ಯಕ್ರಮದಲ್ಲಿ ಸ್ವೀಕೃತವಾಗುವ ಮನವಿ/ ಅಹವಾಲುಗಳನ್ನು ಪಡೆದುಕೊಂಡು ಕ್ರಮ ಜರುಗಿಸಲಾಗುತ್ತಿದೆ.<br><br>ಕಲಬುರಗಿ ಜಿಲ್ಲೆಯಲ್ಲಿ ಶಕ್ತಿ ಯೋಜನೆ ಜಾರಿ ಪೂರ್ವ ಮತ್ತು ನಂತರ ಅನುಸೂಚಿ/ ಸರತಿಗಳ ವಿವರ ಕೆಳಕಂಡಂತಿದೆ.</td></tr>
</table>

<table>
<tr>
<td></td>
<td></td>
<td>
<table>
<tr><th>ವಿವರ</th><th>ಅನುಸೂಚಿಗಳ ಸಂಖ್ಯೆ</th><th>ಸರತಿಗಳ ಸಂಖ್ಯೆ</th></tr>
<tr><td>ಶಕ್ತಿ ಯೋಜನೆ ಮೊದಲು</td><td>789</td><td>4620</td></tr>
<tr><td>ಶಕ್ತಿ ಯೋಜನೆ ನಂತರ (ಜನವರಿ-26)</td><td>957</td><td>6114</td></tr>
<tr><td>ವ್ಯತ್ಯಾಸ</td><td>168</td><td>1494</td></tr>
</table>
ಕಲಬುರಗಿ ಜಿಲ್ಲೆಯ ವ್ಯಾಪ್ತಿಯಲ್ಲಿ "ಶಕ್ತಿ ಯೋಜನೆ" ಪೂರ್ವಕ್ಕೆ ಹೋಲಿಸಿದಲ್ಲಿ ಪ್ರತಿ ದಿನ 168 ಹೆಚ್ಚಿನ ಅನುಸೂಚಿಗಳಿಂದ 1494 ಹೆಚ್ಚುವರಿ ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.
ಸಾರ್ವಜನಿಕ ಪ್ರಯಾಣಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳ ಬೇಡಿಕೆ/ ಅವಶ್ಯಕತೆಗನುಗುಣವಾಗಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಸಾರ್ವಜನಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳು ಸದರಿ ಸಾರಿಗೆಗಳ ಸದುಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ.
</td>
</tr>
<tr>
<td>ಈ.</td>
<td>ಕಲಬುರಗಿ ಕೇಂದ್ರ ವಿಭಾಗದಲ್ಲಿರುವ ಹಳೆಯ ಮತ್ತು ಗುಜರಿಗೆ ಹಾಕಬೇಕಾದ ಬಸ್‌ಗಳ ಸಂಖ್ಯೆ ಎಷ್ಟು; ಅವುಗಳ ಬದಲಿಗೆ ಹೊಸ ಬಸ್‌ಗಳ ಹಂಚಿಕೆ ಯಾವಾಗ ಕೈಗೊಳ್ಳಲಾಗುವುದು?.</td>
<td>
ಕಲಬುರಗಿ ಕೇಂದ್ರ ವಿಭಾಗದಲ್ಲಿ ಪ್ರಸ್ತುತ ಹಳೆಯ ಮತ್ತು ಗುಜರಿಗೆ ಹಾಕಬೇಕಾದ ಯಾವುದೇ ಬಸ್ಸುಗಳು ಇರುವುದಿಲ್ಲ.
2025-26ನೇ ಸಾಲಿನಲ್ಲಿ 450 ನಿಷ್ಕ್ರಿಯೆಗೊಂಡ ಬಸ್‌ಗಳ ಬದಲಾಗಿ ಹಾಗೂ 300 ಬಸ್‌ಗಳು ಹೊಸ ಮಾರ್ಗಗಳ ಮೇಲೆ ಕಾರ್ಯಾಚರಣೆಗಳಿಸಲು ಒಟ್ಟಾರೆ 750 ವಿವಿಧ ಮಾದರಿಯ ಹೊಸ ಬಸ್ಸುಗಳನ್ನು ಖರೀದಿಸಲು ಯೋಜನೆ ರೂಪಿಸಲಾಗಿದ್ದು, ಈ ಪೈಕಿ 400 ಬಸ್ಸುಗಳ ಖರೀದಿಗೆ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗಿದ್ದು, ಸದರಿ ಬಸ್ಸುಗಳ ಖರೀದಿಗೆ ಅನುದಾನ ಮಂಜೂರಾತಿ ಕೋರಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುದಾನ ಲಭ್ಯತೆಯನುಸಾರವಾಗಿ ನಿಗಮಕ್ಕೆ ಹೊಸ ಬಸ್ಸುಗಳು ಸರಬರಾಜು ಆದ ನಂತರ ಅವಶ್ಯಕತೆಗೆ ಅನುಗುಣವಾಗಿ ಬಸ್ಸುಗಳನ್ನು ಒದಗಿಸಲಾಗುವುದು.
</td>
</tr>
</table>

ಸಂಖ್ಯೆ: ಟಿಡಿ 40 ಟಿಸಿಕ್ಯೂ 2026

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು